ಸೃಜನಿ

**SRUJANI: Indian Journal of Innovative Research and Development (SIJIRD)**
Volume-2 Issue 5, November-December 2023, Pp. 42-44
Bi-Monthly, Peer-Reviewed, Open Access, Indexed Journal

**I S S N: 2583-3510**
SIRDF JOURNALS
editor@srujani.in
www.srujani.in

# ಗೋನವಾರದ ರಾಮದಾಸರ ಹಾಡುಗಳಲ್ಲಿ ಮತ ಸಾಮರಸ್ಯ ಚಿಂತನೆ

**ಡಾ. ಪ್ರಕಾಶ ಹಣಮಂತ ಸಂಗಮ**
ಅತಿಥಿ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

**Abstract:**
*ಹರಿದಾಸ ಸಾಹಿತ್ಯ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸುವರ್ಣಾಕ್ಷಗಳಿಂದ ಬರೆದಿಡುವಂಥದ್ದಾಗಿದೆ. ಈ ಹಿನ್ನಲೆಯಲ್ಲಿ ಭಾಗವತ ಮತತತ್ವಕ್ಕನುಸರವಾಗಿ ರಾಮದಾಸರು ಚಿಂತನೆಯ ರೀತಿಯನ್ನು ಗುರುತಿಸಲಾಗುವುದು. ಇದುವರೆಗಿನ ಹರಿದಾಸರ ಮತತತ್ವ ಚಿಂತನೆಯ ರೀತಿ ಹಾಗೂ ಭಕ್ತಿಸ್ವರೂಪದ ವಿವರಣೆಯೊಂದಿಗೆ ರಾಮದಾಸರು ಕಂಡುಕೊಂಡ ಮತಧರ್ಮ ನಿಷ್ಠೆ ಹಾಗೂ ಸಾಮಾಜಿಕ ಚಿಂತನೆಯ ಜೊತೆಗೆ ಹರಿದಾಸರ ವಯಕ್ತಿಕ ಬದುಕಿನ ವಿವರಣೆಗಳನ್ನು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಹರಿದಾಸ ಸಾಹಿತ್ಯ, ಭಕ್ತಿ ಚಳುವಳಿ, ಗೋನವಾರದ ರಾಮದಾಸರು, ಸಾಮರಸ್ಯೆ ಚಿಂತನೆ.*

## ಪೀಠಿಕೆ

ಹರಿದಾಸ ಸಾಹಿತ್ಯವು ಇಹ ಮತ್ತು ಪರದ ಹಾದಿಗೆ ಕನ್ನಡಿ ಹಿಡಿಯುತ್ತದೆ. ಇಲ್ಲಿ ಸಲ್ಲುವವನು ಅಲ್ಲಿಯೂ ಸಲ್ಲುತಾನೆ ಎಂಬ ಸಂದೇಶವನ್ನು ಸಾರುತ್ತದೆ. ನಾವು ಇಹದಲ್ಲಿ ನಮ್ಮ ಬಾಂಧವ್ಯದ ವಲಯವನ್ನು ನಮ್ಮ ಸನ್ಮಾರ್ಗದ ನಡತೆಯಿಂದ ವಿಸ್ತರಿಸಿಕೊಳ್ಳಬೇಕು. ಎಲ್ಲರನ್ನು ಪ್ರೀತಿಸುವ, ಗೌರವಿಸುವ ಮೂಲಕ ಸಮಾಜದ ಬಲಸಂವರ್ಧನೆಗೆ ಕಾರಣ ವಾಗಬೇಕು.ಶರಣರ ವಚನಗಳು, ಹರಿದಾಸರ ಹಾಡುಗಳು ನಮ್ಮ ಸಣ್ಣತನ ಸಂಕುಚಿತ ಮನೋಭಾವ ದೂರಸರಿಸಿ ಎಲ್ಲರೊಂದಿಗೆ ಐಕ್ಯತೆಯಿಂದ ಬಾಳಲು ಮುಖ್ಯ ಭೂಮಿಕೆ ಒದಗಿಸುತ್ತವೆ. ನಾವು ಜಾತಿ, ಕುಲ, ಲಿಂಗಭೇದಗಳನ್ನು ಬದಿಗಿರಿಸಿ ಕಾಯಕದಲ್ಲಿ ತಲ್ಲೀನರಾಗಲು ಮತ್ತು ದಾನ ದಾಸೋಹದ ಮೂಲಕ ದೇಶದ ಪ್ರಗತಿಸಾಧಿಸಲು ಮತ್ತು ದೀನದುರ್ಬಲರಿಗೆ ಸಹಾಯ ಸಲ್ಲಿಸಲು ಮಾರ್ಗ ರೂಪಿಸುತ್ತವೆ. ಒಟ್ಟಾಗಿ ಬಾಳಿದರೆ ಮಾನವ ಕುಲಕ್ಕೆ ಸ್ವರ್ಗಸುಖವಿದೆ. ನಾವು ಹೇಗೆ ಸಂಪನ್ಮೂಲ ವ್ಯಕ್ತಿಗಳಾಗಬೇಕು, ಧರ್ಮದ ಹಾದಿಯಲ್ಲಿ ಮುಂದುವರೆಯಬೇಕು ಎಂಬುದಕ್ಕೆ ಶರಣರ ಹರಿದಾಸರ ಚಿಂತನೆ ಪ್ರಸ್ತುತವಾಗಿದ್ದು ಪರಮತ–ಪರಧರ್ಮಸಹಿಷ್ಣುತೆ ಯಿಂದಾಗುವ ಲಾಭಗಳ ಕುರಿತು ಶರಣರ ವಚನಗಳು ಹಾಗೂ ಹರಿದಾಸರ ಹಾಡುಗಳು ಮನದಟ್ಟಾಗಿಸುತವೆ. ಕನ್ನಡ ಸಾಹಿತ್ಯ 1500 ವರ್ಷಗಳ ಇತಿಹಾಸ ಹೊಂದಿರುವ ಶ್ರೀಮಂತ ಸಾಹಿತ್ಯವಾಗಿದ್ದು ಇಲ್ಲಿ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡಗಳೆಂಬ ಅವಸ್ಥಾಭೇದಗಳಿವೆ. ಕಥೆ, ಕಾವ್ಯ, ಕಾದಂಬರಿ, ಪ್ರಬಂಧ, ಪ್ರವಾಸಕಥನ ಅಂಕಣ ಬರೆಹಗಳೆಂಬ ಆಧುನಿಕ ಸಾಹಿತ್ಯ ಪ್ರಕಾರಗಳು ಮನುಷ್ಯರ ವರ್ತನೆಗೆ ಕನ್ನಡಿ ಹಿಡಿಯುತ್ತವೆ.

**Please cite this article as:** ಪ್ರಕಾಶ ಹಣಮಂತ ಸಂಗಮ. (2023). ಗೋನವಾರದ ರಾಮದಾಸರ ಹಾಡುಗಳಲ್ಲಿ ಮತ ಸಾಮರಸ್ಯ ಚಿಂತನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(5), 42–44.

ಯಾವೊಂದು ಪ್ರಕಾರವೂ ತನ್ನ ಪರಿಧಿಯೊಳಗೆ ಏನೆಲ್ಲ ತತ್ವ–ಸತ್ವ ಹುದುಗಿಸಿ ಕೊಂಡು ಶ್ರೀಸಾಮಾನ್ಯರಿಗೆ ದಾರಿ ತೋರುತ್ತಿದೆ ಎಂಬುದಕ್ಕೆ ವಿಶೇಷ ಅಧ್ಯಯನಗಳ ಅಗತ್ಯವಿದೆ. ಮನುಷ್ಯರ ಮಧ್ಯದ ಸಂಕುಚಿತ, ಸ್ವಾರ್ಥ ಹಾಗೂ ಸಣ್ಣತನದ ಭಾವನೆಗಳನ್ನು ದೂರವಿರಿಸಲು ಶರಣರ ವಚನಗಳು, ಹರಿದಾಸರ ಹಾಡುಗಳು ತವನಿಧಿಯಂತಿವೆ. ಹಾಗಾಗಿ ಶರಣರ ಹಾಗೂ ಹರಿದಾಸರ ಜೀವನವೇ ಓದಿಗೆ–ಸಂಶೋಧನೆಗೆ ತಾತ್ವಿಕತೆಗೆ ಹಾಗೂ ಜೀವನ ದರ್ಶನಕ್ಕೆ ಇರುವ ಪ್ರಮುಖ ವಸ್ತುವಾಗಿದೆ.

ಹರಿದಾಸರಲ್ಲಿ ಪಿಂಜಾರ ರಾಮದಾಸರು ಮತಧರ್ಮಸಾಮರಸ್ಯಕ್ಕೆ, ಜಾತ್ಯತೀತ ಧೋರಣೆಗೆ ಹಾಗೂ ಹಾಡಿನ ಮೂಲಕ ಜನರ ಭಾವ ಪರಿಶೋಧನೆಗೆ ಕಾರಣರಾಗಿದ್ದು ಅವರ ಹಾಡುಗಳ ಅಧ್ಯಯನದಿಂದ ಒಂದು ಪರಿಪೂರ್ಣ ಮಾಗಿದ ಮನಸ್ಸಿನ ಚಿಂತನೆಯ ರೀತಿಯ ಅರಿವಾಗುವುದರಲ್ಲಿ ಸಂದೇಹವಿಲ್ಲ. ಅವರ ನಡೆ–ನುಡಿ ಹಾಗೂ ತತ್ವಚಿಂತನೆಗೆ ಅವರ ಹಾಡುಗಳಿಂದಲೇ ಉತ್ತರ ಸಿಗುತ್ತದೆ. ಆದ್ದರಿಂದ ರಾಮದಾಸರು ಹಾಡುಗಳಲ್ಲಿ ಮತೀಯ ಸಾಮರಸ್ಯ ಹೆಚ್ಚಿಸುವ ಹಾಡುಗಳನ್ನು ಅಧ್ಯಯನ ಮಾಡಲಾಗಿದೆ.

**ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ**

ಭಕ್ತಿಯ ಉಗಮ ಇಂದು ನಿನ್ನೆಯದಲ್ಲ. ವೇದಕಾಲೀನ ಸಂಸ್ಕೃತಿ ಹಾಗೂ ಸಿಂಧೂ ನದಿಯ ನಾಕರಿತೆಯ ಕಾಲದಿಂದಲೂ ಅದನ್ನು ಗುರುತಿಸಬಹುದಾಗಿದೆ. ಮಹಾಮಹಾ ಋಷಿಗಳು ಭಕ್ತಿಯ ವಿಷಯದಲ್ಲಿ ಜಜ್ಞಾಸೆ ನಡೆಸಿದ್ದಾರೆ. ವೇದೋಪನಿಷತ್ತು, ಮಹಾಕಾವ್ಯಗಳಲ್ಲೂ ಭಕ್ತಿಯ ಜಿಜ್ಞಾಸೆಗಳಿವೆ. ಭಗವದ್ಗೀತೆಯಲ್ಲಿ ಭಕ್ತಿಯೋಗವೆನ್ನಿಸಿಕೊಂಡಿದೆ. ಕರ್ನಾಟಕದಲ್ಲಿ ಭಕ್ತಿಚಳುವಳಿಗೆ ಬಹುದೊಡ್ಡ ಇತಿಹಾಸವಿದೆ. ಶರಣರು, ಹರಿದಾಸರು ಭಕ್ತಿಯ ಸ್ವರೂಪ, ಸ್ಥಲಗಳ ಪರಿಕಲ್ಪನೆ ಹಾಗೂ ಸಾಧಕರ ಪರಿಕಲ್ಪನೆಗಳ ಕುರಿತು ಹೇಳಿದ್ದಾರೆ. ಶರಣರು ಮತ್ತು ಹರಿದಾಸರು ನಡೆಸಿದ ಚಳುವಳಿ ಕರ್ನಾಟಕದಲ್ಲಿ ಶ್ರೇಷ್ಠವಾದಂತೆ ಭಾರತದ ಇತರೆಡೆಗಳಲ್ಲೂ ಭಕ್ತಿಚಳುವಳಿಗಳು ನಡೆದಿವೆ. ಭಕ್ತಿಯ ಬೆಳವಣಿಗೆಯಲ್ಲಿ ಧರ್ಮಗಳ ಪಾತ್ರ ದೊಡ್ಡದಾಗಿದೆ. ಜೈನರು, ವಚನಕಾರರು, ಹರಿದಾಸರು ತಮ್ಮ ಸಾಹಿತ್ಯ ಮುಖೇನ ಭಕ್ತಿಗೆ ನಿಶ್ಚಿತ ಸ್ವರೂಪ ಕಲ್ಪಿಸಿಕೊಟ್ಟಿದ್ದಾರೆ. ವಚನಕಾರರಂತೆ ಹರಿದಾಸರಲ್ಲೂ ಭಕ್ತಿಯ ಚಳುವಳಿಗೆ ಶ್ರೀಪಾದರಾಯರು, ನರಹರಿತೀರ್ಥರು, ವ್ಯಾಸರಾಯರು, ಪುರಂದರ–ಕನಕದಾಸರು ಮೊದಲಾಗಿ ಹಲವರು ಕೊಟ್ಟ ಕೊಡುಗೆ ಮನುಷ್ಯರ ವರ್ತನೆಗಳನ್ನು ತಿದ್ದಲು ಸಹಾಯಕವಾಗಿದೆ.

ರಾಮದಾಸರು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜೋಳದ ಹೆಡಿಗೆ ಗ್ರಾಮದಲ್ಲಿ 1882 ರಲ್ಲಿ ಹುಟ್ಟಿದರು. ಅವರ ತಂದೆ ಖಾಜಾಸಾಹೇಬ.ತಾಯಿ ಪೀರಮ್ಮ. ರಾಮದಾಸರು ಬಡತನದ ಕಾರಣ ಕೇವಲ ನಾಲ್ಕನೇ ತರಗತಿಯ ವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದರು. ಮಾಲಿಪಾಟೀಲರ ಅಂಗಡಿಯಲ್ಲಿ ಪಾರಂಭದಲ್ಲಿ ಲೆಕ್ಕಪತ್ರ ಬರೆಯುವ ಕಾಯಕದಲ್ಲಿದ್ದರು. ಅದು ಹಿಡಿಸದಾದಾಗ ಊರು ಬಿಟ್ಟು ಮಾನ್ವಿ ತಾಲ್ಲೂಕಿನ ಹಡಿಗೆಗೆ ಬಂದು ಖಾಸಗೀ ಶಾಲೆ ತೆರೆದರು. ಅಲ್ಲೂ ಹಣಕಾಸಿನ ತೊಂದರೆಯಿಂದಾಗಿ ಮರಳಿ ಜೋಳದ ಹೆಡಿಗೆಗೆ ಬರ ಬೇಕಾಯಿತು. ಹುಸೇನಮ್ಮ ಎಂಬ ಕನ್ನೆಯ ಕೈಹಿಡಿದು ಸಂಸಾರಕ್ಕಿಳಿದರಾದರೂ ತಂದೆತಾಯಿಯ ಅಗಲಿಕೆಯಿಂದ ನೊಂದರು. ಹಾಲಪುರದಲ್ಲಿ ಯೋಗಿಂದ್ರ ದೇಸಾಯಿ ಎಂಬುವವರ ಮನೆಯಲ್ಲಿ ವಾಸಮಾಡಿ ವರ್ಷಪರ್ಯಂತ ಪಾಠಪ್ರವಚನ ನಂತರ ಗೋನವಾಲ ಗ್ರಾಮದಲ್ಲಿ ಹಲವು ವರ್ಷ ಮಕ್ಕಳಿಗಾಗಿ ಶಾಲೆ ಪ್ರಾರಂಭಿಸಿ ಶಿಕ್ಷಕರಾಗಿ ದುಡಿದರು. ರಾಮದಾಸರು ಬದುಕು ಹೂವಿನ ಹಾಸಿಗೆಯಾಗಿರಲಿಲ್ಲ. ಅವರು ಉದರ ಪೋಷಣೆಗೆ ಗುತ್ತೇ ದಾರಿಕೆಯನ್ನೂ ಮಾಡಬೇಕಾಯಿತು. ರಾಯಚೂರಿನಲ್ಲಿ ಸಾಧು ಒಬ್ಬರ ಪರಿಚಯವಾಗಿ ಹಂಪಿಗೆ ಹೋದರು. ಅಲ್ಲೂ ಮನಸ್ಸು ಬಾರದೇ

ಚಕ್ರತೀರ್ಥಕ್ಕೆ (ತುಂಗಭದ್ರಾ ನದಿಯ ತೀರದ ಹರವಿನ ಪ್ರದೇಶ) ಹಾರಿ ಪ್ರಾಣ ಬಿಡಲು ನೋಡಿದರು. ಆಗರೆ, ಶ್ರೀಹರಿಯೇ ಅವರಿಗೆ ದಾಸನಾಗು ಎಂದು ಹೇಳಿದಂತಾಗಿ ಹರಿದಾಸರಾದರು. ಭಜನೆ ಬರವಣಿಗೆ ಪ್ರಾರಂಭವಾದವು. ಹಾಲಪುರ, ಮಸ್ಕಿ, ಗೌಡೂರು, ಇಟಗಿಗಳಲ್ಲಿ ಅವರ ಸ್ನೇಹಿತರಿದ್ದರು. ಅಧ್ಯಾತ್ಮ ಚಿಂತನೆಗೆ ಪ್ರೇರಣೆ ನೀಡಿದರು. ರಾಮದಾಸರು ಜೀವನದ ಕೊನೆಯಲ್ಲಿ ಮತ್ತೊಂದು ಅಲ್ಲಮ್ಮ ಎಂಬ ಕನ್ಯೆಯ ಕೈಹಿಡಿದು ದೇವದುರ್ಗ ತಾಲ್ಲೂಕಿನ ಲಿಂಗದಳ್ಳಿಗೆ ಬಂದರು. ಅಲ್ಲಿಯೇ ತಮ್ಮ ಜೀವಿತಾವಧಿಯ ಕೊನೆಯ ವರೆಗೂ ಇದ್ದರು.

ರಾಮದಾಸರು 680 ಕೀರ್ತನೆ, 110 ಉಗಾಭೋಗ, 5 ಶತಾಷ್ಟಕ ಹಾಗೂ ಅನ್ಯಭಾಷೆಯಲ್ಲಿ 10 ಕೀರ್ತ ನೆಗಳನ್ನು ಬರೆದಿದ್ದಾರೆ. ಇವರ ಹಾಡುಗಳ ಸಾಮಾಜಿಕ ಕಾಳಜಿ ಮಹತ್ವದ್ದಾಗಿದೆ. ಕನಕದಾಸರಂತೆ ರಾಮದಾಸರು ಮತಧರ್ಮ ತತ್ವಚಿಂತನೆಗೆ ಸಮಾಜದ ಡೊಂಕಿನಿಂದಲೇ ಪ್ರೇರಿತರಾಗಿದ್ದಾರೆ.

ಹರಿದಾಸ ಸಾಹಿತ್ಯ ವ್ಯಾಸಕೂಟ ಮತ್ತು ದಾಸಕೂಟಗಳ ಮೂಲಕ ಬೆಳೆದುಬಂದಿದೆ. ಹರಿಯೇ ಸರ್ವೋತ್ತಮನೆಂಬ ಭಾವನೆಯಿಂದ ನವವಿಧ ಭಕ್ತಿಯ ಮೂಲಕ ಹರಿಯನ್ನು ಪೂಜಿಸುವ ಸಾಹಿತ್ಯ ರಚಿಸುವ ಕೆಲಸ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಎಲ್ಲ ಹರಿದಾಸರು ನಾಮಮಹಿಮೆ, ಕೃಷ್ಣಲೀಲೆ, ಅಂತರಂಗದ ತಳಮಳ ಹಾಗೂ ಧರ್ಮಬೋಧೆಗೆ ಕೀರ್ತನೆಗಳನ್ನು ಮೀಸಲಿರಿಸಿದ್ದಾರೆ. ಕಾವ್ಯದ ಲಕ್ಷಣಗಳು ಹಾಗೂ ಪ್ರಯೋ ಜನಗಳು ಹರಿದಾಸರ ಹಾಡುಗಳ ಮೂಲಕವೂ ಗೋಚರವಾಗುತ್ತವೆ. ಹಾಡುಗಳಿಂದ ಜನರ ನೈತಿಕತೆ ಹಾಗೂ ದುಡಿಮೆಯ ಪ್ರವೃತ್ತಿ ಹೆಚ್ಚಬೇಕು. ನಮ್ಮ ಅಹಂಕಾರ ತೊಲಗಿ ಸಮಾಜಸೇವೆಯ ಭಾವ ಮೂಡಬೇಕು. ಅಂಥ ಹಾಡುಗಳ ಅಧ್ಯಯನ ಹಾಗೂ ಅರ್ಥಶೋಧನೆಗಳಿಂದ ಪ್ರಯೋಜನವಿದೆ. ಗ್ರೀಕ್ ತತ್ವಜ್ಞಾನಿ ಪ್ಲೆಟೋ ಹಾಗೂ ಅರಿಸ್ಟಾಟಲ್ ಬಯಸಿದ್ದು ಇದನ್ನೇ. ಭಾವನೆಗಳ ಉದ್ದೀಪನೆ ಹಾಗೂ ಭಾವ ಪರಿಶೋಧನೆ. ಅದು ನನ್ನ ಸಂಶೋಧನೆಯ ವಿಷಯವಾದ ರಾಮದಾಸರು ಹಾಡುಗಳಲ್ಲಿ ಮತಸಾಮರಸ್ಯ ಚಿಂತನೆಯಿಂದ ಕಂಡುಕೊಳ್ಳಬ ಹುದಾಗಿದೆ. ಹರಿದಾಸರೆಲ್ಲ ಯಾಂತ್ರಿಕ ಜೀವನದ ನಿರರ್ಥಕತೆಯನ್ನು ಸಾರಿ ಭಕ್ತಿಮಾರ್ಗದಲ್ಲಿ ಮುನ್ನಡೆಸಿದ್ದಾರೆ. ಶ್ರೀಪಾದರಾಯರು, ನರಹರಿತೀರ್ಥರು, ವ್ಯಾಸರಾಯರು, ಕನಕ–ಪುರಂದರ, ವಿಜಯದಾಸ, ಗೋಪಾಲದಾಸ, ಜಗನ್ನಾಥದಾಸರು ಹಾಕಿಕೊಟ್ಟ ಮಾರ್ಗ ಹರಿದಾಸ ಸಹಿತ್ಯದ ಮೌಲ್ಯಹೆಚ್ಚಳಕ್ಕೆ ಕಾರಣವಾಗಿದೆ. ರಾಜಾಶ್ರಯದಲ್ಲಿ ಬೆಳೆದ ಹರಿದಾಸ ಸಾಹಿತ್ಯ ಹಲವು ವಿದ್ವಾಂಸರ ವ್ಯಾಖ್ಯಾನ ವಿಮರ್ಶೆಗಳಿಂದ ಕರ್ನಾಟಕದ ಜನಮಾನಸವನ್ನು ತಲುಪಿದೆ. ಅನ್ಯಧರ್ಮೀಯರೂ ವೈಷ್ಣವ ಮತ– ಸಾಹಿತ್ಯಕ್ಕೆ ಮಾರುಹೋಗಿ ತತ್ವಪ್ರಚಾರ ಮಾಡಿದ್ದಾರೆ. ಅಂಥ ವ್ಯಕ್ತಿಗಳ ಜೀವನ ಸಂದೇಶ ಹಾಗೂ ಮತಸಾಮರಸ್ಯ ಚಿಂತನೆ ಅರಿಯುವುದು ಇಂದಿನ ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಎಚ್ಎಸ್ಕೆ. (1984). ದಾಸ ಸಾಹಿತ್ಯ ದರ್ಶನ. ಮಂಗಳ ಭಾರತೀ ಪ್ರಕಾಶನ.
- ಪಂಚಮುಖಿ ಆರ್ ಎಸ್. (1951). *ಕರ್ನಾಟಕ ಹರಿದಾಸ ಸಾಹಿತ್ಯ*. ಕನ್ನಡ ಸಾಹಿತ್ಯ ಪರಿಷತ್ತು.
- ರಾಮಶೇಷನ್ ನಿ.ಕೃ. (1991). *ಹರಿದಾಸ ಆಂದೋಲನ: ಒಂದು ಅಧ್ಯಯನ.* ಮಿತ್ರ ಪ್ರಿಂಟರ್ಸ್.
- ವರದರಾಜಾ ರಾವ್ ಜಿ. (ಸಂ.). ಹರಿದಾಸ ಸಾಹಿತ್ಯ ಸಮೀಕ್ಷೆ. ಮೈಸೂರು ವಿಶ್ವವಿದ್ಯಾನಿಲಯ.
- ವಿನೋದ ಬಾಯಿ. ಕರ್ನಾಟಕದ ಹರಿದಾಸರು. ಪರಿಮಳ ಪ್ರಕಾಶನ.